# ಖ್ಯಾತಿಯ ಉತ್ತುಂಗದಲ್ಲಿ..

ಕಳೆದ ವಾರವಿಡೀ ಸಾಮಾಜಿಕ ಜಾಲತಾಣಗಳಲ್ಲಿ ಲೇಡಿ ಗಾಗಾ ಸುದ್ದಿಯೇ ಸುದ್ದಿ. 2016ರಲ್ಲಿ ವಿಶ್ವದಲ್ಲೇ ಅತ್ಯಂತ ಹೆಚ್ಚು ವಾರ್ಷಿಕ ಆದಾಯ ಪಡೆದಿರುವ ಈ ಅಮೆರಿಕನ್ ಪಾಪ್ ಗಾಯಕಿಯ 'ವಿವಾಹ ನಿಶ್ಚಿತಾರ್ಥದ ದಿನ ನಿಗದಿಯಾಗಿದೆ' ಎನ್ನುವುದು ಮೊದಲು ಬಂದ ಸುದ್ದಿ. ಅದಾಗಿ ಎರಡೇ ದಿನಗಳಲ್ಲಿ 'ಲೇಡಿ ಗಾಗಾ ಗರ್ಭಿಣಿಯಂತೆ' ಎನ್ನುವ ಸುದ್ದಿ ತೇಲಿಬಂತು. ಮರುದಿನ 'ಲೇಡಿ ಗಾಗಾ ಹಠಾತ್ ನಿಧನ' ಎಂಬ ಸುದ್ದಿ ಕಾಳ್ಗಿಚ್ಚಿನಂತೆ ಹಬ್ಬಿತು. ಈ ಸುದ್ದಿಯ ದಾಳಿ ಎಷ್ಟು ಜೋರಾಗಿತ್ತೆಂದರೆ ಟ್ವಿಟ್ಟರ್ ಮತ್ತು ಎಫ್‌ಬಿ ಗಳಲ್ಲಿ ಒಂದೆರಡು ಗಂಟೆಗಳಲ್ಲಿಯೇ ಹತ್ತು ಲಕ್ಷಕ್ಕೂ ಹೆಚ್ಚು ಲೈಕ್‌ಗಳು ಬಂದು ಬಿದ್ದವು. ಸಾವಿರಾರು ಜನ ತಮ್ಮ ಶ್ರದ್ಧಾಂಜಲಿ ಸಲ್ಲಿಸಿದರು!

ಲೇಡಿ ಗಾಗಾ ಸತ್ತಿರುವ ಸುದ್ದಿ ಹಸೀ ಸುಳ್ಳು ಎನ್ನುವುದು ಒಂದೆರಡು ಗಂಟೆಗಳಲ್ಲೇ ಖಚಿತವಾಯಿತು. ಸ್ವತಃ ಆಕೆಯ ಕಾರ್ಯದರ್ಶಿ ಈ ಸುದ್ದಿಯನ್ನು ನಿರಾಕರಿಸಿ ಟ್ವೀಟ್ ಮಾಡಿದ. ಆದರೆ ಅದಕ್ಕೂ ಹಿಂದಿನ ಎರಡು ಸುದ್ದಿಗಳಿಗೆ ಈತ 'ನೋ ಕಾಮೆಂಟ್ಸ್' ಎಂದದ್ದು ಅಭಿಮಾನಿಗಳಲ್ಲಿ ಇನ್ನಷ್ಟು ಕುತೂಹಲ ಹೆಚ್ಚುವಂತೆ ಮಾಡಿತು. 'ಆಕೆಯ ಹೊಟ್ಟೆ ಸ್ವಲ್ಪ ಉಬ್ಬಿದೆ' ಎಂದು ಕೆಲವರು ಹೇಳಿದರೆ, ಇನ್ನು ಕೆಲವರು 'ತನ್ನ ಬಾಯ್‌ಫ್ರೆಂಡ್ ಜತೆ ಲೇಡಿ ಗಾಗಾ ಹಲವು ಆಭರಣ ಅಂಗಡಿಗಳಿಗೆ ಹೋಗಿದ್ದಾಳೆ. ಅಲ್ಲಿ ವಜ್ರದ ಉಂಗುರ ಖರೀದಿಗೆ ಯತ್ನಿಸಿದ್ದಾಳೆ' ಎಂದು ಇನ್ನು ಕೆಲವರು ಸುದ್ದಿ ಹಬ್ಬಿಸಿದ್ದಾರೆ. ಒಟ್ಟಾರೆ ಈಗ ಈಕೆ ಸುದ್ದಿ ಸುಬ್ಬಕ್ಕ.

ಲೇಡಿ ಗಾಗಾ ಅಭಿಮಾನಿಗಳು ಭಾರತದಲ್ಲೂ ಸಾಕಷ್ಟಿದ್ದಾರೆ. ಅದರ ಫಲಶ್ರುತಿಯೋ ಎಂಬಂತೆ ದೆಹಲಿಯ ಮೇಡಂ ಟುಸ್ಸಾಡ್ ಗ್ಯಾಲರಿಯಲ್ಲಿ ಇದೀಗ ಈಕೆಯ ಮೇಣದ ಪ್ರತಿಮೆ ಸಿದ್ಧವಾಗಿದೆ. ಈಕೆಯ ಪಕ್ಕದಲ್ಲೇ ನಮ್ಮ ಅಮಿತಾಭ್ ಬಚ್ಚನ್ ಪ್ರತಿಮೆಯನ್ನೂ ನಿಲ್ಲಿಸಲಾಗಿದೆ.



ಸ್ಟಿಫಾನಿ ಜೋನ್ ಏಂಜೆಲಿನಾ ಗರ್ಮನೊಟ್ಟಾ ಎಂಬ ದೀರ್ಘ ಹೆಸರನ್ನು ವೃತ್ತಿಜೀವನಕ್ಕಾಗಿ ಲೇಡಿ ಗಾಗಾ ಎಂದು ಬದಲಿಸಿಕೊಂಡ ಈಕೆ, ಸದ್ಯಕ್ಕೆ ಪಾಪ್ ಗಾಯಕಿಯರಲ್ಲೇ ಅತ್ಯಂತ ಶ್ರೀಮಂತೆ. 30ರ ಹರೆಯದಲ್ಲಿ (ಬರ್ತ್‌ಡೇ 28–3–1986) ಇಷ್ಟೊಂದು ಖ್ಯಾತಿ ಪಡೆದ ಇನ್ನೊಬ್ಬ ಹಾಲಿವುಡ್ ಗಾಯಕಿ ಬೇರೆ ಯಾರೂ ಇಲ್ಲ ಎನ್ನಬಹುದು. ಗಾಯಕಿ, ನಟಿ ಮಾತ್ರವಲ್ಲದೆ ಸ್ವತಃ ಹಾಡುಗಳನ್ನು ಬರೆಯುವ ಕವಯಿತ್ರಿಯೂ ಹೌದು. ವಿಶ್ವದಾದ್ಯಂತ ಕೋಟ್ಯಂತರ ಅಭಿಮಾನಿಗಳನ್ನು ಹೊಂದಿರುವ ಲೇಡಿ ಗಾಗಾ, ಸದ್ಯಕ್ಕೆ 220 ದಶಲಕ್ಷ ಡಾಲರ್ ಆಸ್ತಿಮೌಲ್ಯದ ಒಡತಿ. ಜಾಗತಿಕ ಸಂಗೀತಗಾರರರಲ್ಲಿ ಅತ್ಯಧಿಕ ಆಲ್ಬಂ ಮಾರಾಟ ಹೊಂದಿರುವ ಸಾರ್ವಕಾಲಿಕ ದಾಖಲೆ ಈಕೆಯದ್ದು. ಈಕೆ ತನ್ನ ಸಿಂಗಲ್ ಆಲ್ಬಂಗಳ ಮೂಲಕವೇ 140 ದಶಲಕ್ಷ ಅಮೆರಿಕನ್ ಡಾಲರ್ ಸಂಭಾವನೆ ಗಳಿಸಿದ್ದರೆ, ಇತರರ ಜತೆಗೆ ಹಾಡಿ ಕುಣಿದ ಆಲ್ಬಂ ಗಳ ಮೂಲಕ 28 ದಶಲಕ್ಷ ಅಮೆರಿಕನ್ ಡಾಲರ್ ಗಳಿಸಿದ್ದಾಳೆ. ವೇದಿಕೆಯ ಮೇಲಿನ ಕುಣಿತ ಮತ್ತು ಮಾದಕ ಧ್ವನಿಯಿಂದ ಪ್ರೇಕ್ಷಕರಿಗೆ ಹುಚ್ಚು ಹಿಡಿಸಿಬಿಡುವ ಲೇಡಿ ಗಾಗಾ, ಸ್ವತಃ ಫ್ಯಾಶನ್ ಡಿಸೈನರ್ ಕೂಡಾ. ಸಂಗೀತಕ್ಕಾಗಿ 6 ಬಾರಿ ಗ್ರಾಮ್ಮಿ ಪ್ರಶಸ್ತಿ ಗೆದ್ದುಕೊಂಡಿರುವ ಈಕೆ, ಮಾನ್‌ಸ್ಟರ್ ಕೇಬಲ್ ಎಂಬ ವಿಶ್ವಖ್ಯಾತಿಯ ಫ್ಯಾಶನ್ ಬಟ್ಟೆಬರೆ ಬ್ರ್ಯಾಂಡ್‌ನ ಪಾಲುದಾರಳೂ ಹೌದು.

ಸಾವಿನ ಸುದ್ದಿ ಸುಳ್ಳು ಎನ್ನುವುದು ಖಚಿತವಾದ ಬಳಿಕ ಸಾಮಾಜಿಕ ಜಾಲತಾಣಗಳಲ್ಲಿ '30ರ ಹರೆಯದಲ್ಲೇ ಲೇಡಿ ಗಾಗಾ ನಿವೃತ್ತಿ' ಎಂಬ ಸುದ್ದಿ ಹಬ್ಬಿತು! ಈಕೆಯ ಕಾರ್ಯದರ್ಶಿ ಯಥಾ ಪ್ರಕಾರ 'ನೋ ಕಾಮೆಂಟ್ಸ್' ಎಂದು ಪ್ರತಿಕ್ರಿಯೆ ನೀಡಿದ್ದಾನೆ. ಹಾಗಾಗಿ ಈ ಸುದ್ದಿ ಸದ್ಯಕ್ಕೆ ಸತ್ತಿಲ್ಲ. ಸುದ್ದಿ ಹಬ್ಬಿಸಿದವರ ಪ್ರಕಾರ, 'ಸಂಗೀತ ಕ್ಷೇತ್ರದಲ್ಲಿ 30ರ ಹರೆಯದಲ್ಲೇ ನನಗೆ ಇಷ್ಟೊಂದು ಖ್ಯಾತಿ ಬಂದಿದೆ. ಇಷ್ಟು ಸಾಕು. ಇನ್ನು ನಾನು ಬೇರೆ ಇಷ್ಟದ ಕ್ಷೇತ್ರಗಳಲ್ಲಿ ಮಾಡಬೇಕಾದ ಕೆಲಸವೂ ಸಾಕಷ್ಟಿದೆ' ಎಂದು ಈಕೆ ಹೇಳಿದ್ದಾಳಂತೆ. ತನ್ನ ಕುರಿತ ಗಾಳಿಸುದ್ದಿಗಳ ಬಗ್ಗೆ ಈಕೆ ಯಾವತ್ತೂ ತಲೆ ಕೆಡಿಸಿಕೊಂಡದ್ದಿಲ್ಲ. ಆದರೆ ಈಗಿನ ಬಾಯ್‌ಫ್ರೆಂಡ್ ಜತೆಗೆ ಅತ್ಯಂತ ನಿಕಟವಾಗಿದ್ದು, ಸದ್ಯದಲ್ಲೇ ಇಬ್ಬರ ನಿಶ್ಚಿತಾರ್ಥ ನಡೆದರೂ ಆಶ್ಚರ್ಯವಿಲ್ಲ ಎನ್ನುವುದು ನಿಕಟವರ್ತಿಗಳ ಹೇಳಿಕೆ.

ಬೋರ್ನ್ ದಿಸ್ ವೇ, ಪೋಕರ್ ಫೇಸ್, ಬ್ಯಾಡ್ ರೊಮಾನ್ಸ್, ಜಸ್ಟ್ ಡ್ಯಾನ್ಸ್, ಎಡ್ಜ್ ಆಫ್ ಗ್ಲೋರಿ ಮುಂತಾಗಿ ಸಂಗೀತಪ್ರಿಯರಿಗೆ ಹುಚ್ಚೆಬ್ಬಿಸಿದ ಆಲ್ಬಂಗಳನ್ನು ಲೇಡಿ ಗಾಗಾ ಹೊರತಂದಿದ್ದಾಳೆ. ಇವುಗಳಲ್ಲಿ 'ಜಸ್ಟ್ ಡ್ಯಾನ್ಸ್' ಮ್ಯೂಸಿಕ್ ಆಲ್ಬಂ ಜಗತ್ತಿನ ಸಾರ್ವಕಾಲಿಕ ಶ್ರೇಷ್ಠ ಮ್ಯೂಸಿಕ್ ಆಲ್ಬಂ ಎಂದು ಇತ್ತೀಚೆಗೆ ಸಮೀಕ್ಷೆಯೊಂದರಲ್ಲಿ ಪ್ರಶಸ್ತಿ ಗೆದ್ದಿದೆ. 40 ದೇಶಗಳ ವಿಮರ್ಶಕರು ಗುರುತಿಸಿರುವ ಈ ಆಲ್ಬಂ ನ ಹಾಡುಗಳು ಈಗಾಗಲೆ 20 ಭಾಷೆಗಳಿಗೆ ಅನುವಾದ ಕಂಡಿವೆ.

ಸದ್ಯಕ್ಕೆ ಕೀರ್ತಿಶಿಖರದ ಉತ್ತುಂಗದಲ್ಲಿರುವ ಈ ಫ್ಯಾಷನ್ ಐಕಾನ್, ವರ್ಸೇಸ್ ಮತ್ತು ಮ್ಯಾಕ್ ಬ್ರ್ಯಾಂಡ್‌ಗಳ ರಾಯಭಾರಿ. 2016 ಈಕೆಯ ವರ್ಷವಾಗಿತ್ತು. ಬಹುಶಃ ಸಂಗೀತಕ್ಷೇತ್ರದಲ್ಲಿ 2017ರಲ್ಲೂ ಈಕೆಯೇ 'ನಂಬರ್ ಒನ್' ಆಗಿರುವ ಸಾಧ್ಯತೆ ಹೆಚ್ಚಿದೆ. ■

Printed and Published by B.A. Ravi on behalf of The Printers (Mysore) Private Ltd. Printed at M/s Geetanjali Graphics, # B-71, New No. 84, KSSIDC, Indl Estate, 6th Block, Rajajinagar, Bengaluru- 560010 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65